# ದೀಪಿಕಾ 'ಶುದ್ಧಿ'

ನೂರಾರು ನಟಿಯರು ಬಂದು ಹೋದರೂ ತನ್ನ ಪಟ್ಟಕ್ಕೆ ಧಕ್ಕೆಯಿಲ್ಲ ಎಂದು ನಂಬರ್ ಒನ್ ಸ್ಥಾನದಲ್ಲಿ ಬೀಗುತ್ತಿದ್ದ ಕರೀನಾ ಕಪೂರ್ ಪಟ್ಟ ಕಳೆದುಕೊಳ್ಳುವ ಕಾಲ ಸನ್ನಿಹಿತವಾಯಿತೇ... ಎನ್ನುವ ತೀವ್ರ ಚರ್ಚೆ ಬಾಲಿವುಡ್‌ನಲ್ಲಿ ಶುರುವಾಗಿದೆ.

ಗೆಲುವಿನ ನಾಗಾಲೋಟದಲ್ಲಿರುವ ದೀಪಿಕಾ 'ನಂಬರ್ ಒನ್' ಸ್ಥಾನದಲ್ಲಿರುವ ಕರೀನಾಗೆ ಸಡ್ಡು ಹೊಡೆದು ಈ ವರ್ಷ ಮೆರೆಯುವ ಎಲ್ಲಾ ಲಕ್ಷಣಗಳು ಕಾಣುತ್ತಿದೆ. ಕಳೆದ ವರ್ಷ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಗೋಲಿಯೋಂಕಿ ರಾಮ್‌ಲೀಲಾ–ರಾಸ್‌ಲೀಲಾ' ಚಿತ್ರವನ್ನು 'ಗೋರಿ ತೆರೆ ಪ್ಯಾರ್ ಮೇ' ಚಿತ್ರಕ್ಕಾಗಿ ತಿರಸ್ಕರಿಸಿ ಕೊನೆಗೆ ತಮ್ಮನ್ನು ತಾವೇ ಹಳಿಸಿಕೊಂಡದ್ದಲ್ಲದೆ, ದೀಪಿಕಾ ಗೆಲುವಿಗೆ ನಾನೇ ಕಾರಣ ಎಂದು ಹೇಳಿಕೊಂಡಿದ್ದ ಕರೀನಾರಿಂದ ಈಗ ಮತ್ತೊಂದು ಪ್ರಮುಖ ಚಿತ್ರ ಕೈತಪ್ಪಿ ಹೋಗುತ್ತಿದೆ. ಅದೂ ಆಕೆಯ ಪ್ರತಿಸ್ಪರ್ಧಿ ದೀಪಿಕಾ ಮಡಿಲಿಗೆ ಬೀಳುತ್ತಿದೆ.

'ಕಭಿ ಖುಷಿ ಕಭೀ ಘಮ್'ನ ಜೋಡಿ ಹೃತಿಕ್ ರೋಷನ್ ಮತ್ತು ಕರೀನಾ ಕಪೂರ್‌ರನ್ನು 'ಶುದ್ಧಿ' ಚಿತ್ರದ ಮೂಲಕ ಮತ್ತೆ ಒಂದುಗೂಡಿಸುವ ಸಾಹಸಕ್ಕೆ ಕೈಹಾಕಿದ್ದರು ಕರಣ್ ಮಲ್ಹೋತ್ರಾ. ಆದರೆ ಈ ಯತ್ನಕ್ಕೆ ಒಂದು ವರ್ಷವೇ ಉರುಳಿದೆ. ಇನ್ನು ಸಾಧ್ಯವಿಲ್ಲ ಎಂದು ಈಗ ಖಚಿತವಾಗಿರುವ ಕರಣ್, ಕರೀನಾಳನ್ನು ಕೈಬಿಟ್ಟು ನೇರ ದೀಪಿಕಾ ಮನೆಬಾಗಿಲು ತಟ್ಟಿದ್ದಾರಂತೆ.

ಕಳೆದ ವರ್ಷ ದೀಪಿಕಾ ನಟಿಸಿದ ಚಿತ್ರಗಳೆಲ್ಲವೂ ಸೂಪರ್ ಹಿಟ್. ಶುಕ್ರದೆಸೆಯಲ್ಲಿರುವ ದೀಪಿಕಾ ಇಂಥ ಅವಕಾಶಗಳು ಬಂದಾಗ ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿಲ್ಲ. ಕರೀನಾ ಚಿತ್ರೀಕರಣಕ್ಕೆ ಒಟ್ಟಿಗೆ ಸಾಕಷ್ಟು ಡೇಟ್‌ಗಳನ್ನು ಕೊಡಲು ಮುಂದಾಗುತ್ತಿಲ್ಲ. ಹೀಗಾಗಿ ಅವೆಲ್ಲವೂ ದೀಪಿಕಾ ಖಾತೆಗೆ ಜಮೆಯಾಗುತ್ತಿವೆ. ಅತ್ತ ಬೆಬೋರನ್ನು ಪ್ರೇಕ್ಷಕ ಸ್ವೀಕರಿಸುತ್ತಿಲ್ಲ. ಹೀಗೆ ಮುಂದುವರೆದರೆ ಶೀಘ್ರದಲ್ಲೇ ಕರೀನಾ ಯುಗಾಂತ್ಯ ಸಮೀಪಿಸುವುದರಲ್ಲಿ ಅಚ್ಚರಿಯಿಲ್ಲ ಎನ್ನುತ್ತಿದೆ ಬಿ–ಟೌನ್. 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎಂಬ ಮಾತು ದಿಟವಲ್ಲವೇ?



# ಬಿಪಾಶಾ ಊಟದ ಮನೆ!

ಒಂದು ಕಾಲದಲ್ಲಿ ಸದಾ ಸುದ್ದಿಯಲ್ಲಿರುತ್ತಿದ್ದ ಬಿಪಾಶಾ ಬಸು ಈಗ ಏನು ಮಾಡುತ್ತಿದ್ದಾರೆ? ಅಡುಗೆ ಎಂದು ಕಟಕಿಯಾಡುತ್ತಿದ್ದಾರೆ ಬಿ–ಟೌನಿನ ಕುಹಕಿಗಳು.



ನಿಜ, ಬಣ್ಣದ ಬದುಕು ಮತ್ತು ವೈಯಕ್ತಿಕ ಜೀವನ ಎರಡರಲ್ಲೂ ಕಹಿ ಕಾಣುತ್ತಿರುವ ಬಿಪಾಶಾ ನಿಧಾನವಾಗಿ ಸಾಹಸೋದ್ಯಮಿ ಆಗುತ್ತಿದ್ದಾರೆ. ಫಿಟ್‌ನೆಸ್ ಕುರಿತು ಮಾಹಿತಿ ನೀಡುವ ಸಿ.ಡಿ ಗಳನ್ನು ಹೊರತಂದು ತರಗತಿಗಳನ್ನು ಸಹ ನಡೆಸಿದ್ದ ಬಿಪಾಶಾ, ಬಳಿಕ ತಮ್ಮದೇ ಫ್ಯಾಷನ್ ಲೋಕ ತೆರೆಯುವ ಪ್ರಯತ್ನ ಮಾಡಿದ್ದರು. ಈಗ ಅವರ ಹೊಸ ಯೋಜನೆ ರೆಸ್ಟೋರೆಂಟ್.

ಬಿಪಾಶಾರ ಸಿನಿಮಾ ನಳಪಾಕದ ರುಚಿ ಸವಿದವರಿಗೆ ಈಗ ಆ ಅಡುಗೆ ಹಳಸಿದಂತೆ ಕಾಣುತ್ತಿದೆ. ಕೈಯಲ್ಲಿ ಇನ್ನೂ ನಾಲ್ಕೈದು ಚಿತ್ರಗಳಿದ್ದರೂ ಬಿಪಾಶಾ ಹಾರರ್ ಮತ್ತು ಆ್ಯಕ್ಷನ್ ಸಿನಿಮಾಗಳಿಗೆ ಸೀಮಿತರಾಗುತ್ತಿದ್ದಾರೆ. ಹಾಗಾಗಿ ಬೇರೆ ನೆಲೆ ಕಂಡುಕೊಳ್ಳಲು ಬೇರೆ ಹಾದಿ ಹಿಡಿಯುವುದು ಅನಿವಾರ್ಯವಾಗಿದೆ.

ತಾನು ತಿಂಡಿಪೋತಿ ಎಂದು ಹೇಳಿಕೊಳ್ಳುವ ಬಿಪಾಶಾ ರೆಸ್ಟೋರೆಂಟ್ ಉದ್ಯಮಕ್ಕೆ ಕೈ ಹಾಕುತ್ತಿರುವುದು ಅಚ್ಚರಿಯೇನಲ್ಲ. ಸಚಿನ್, ಸೆಹ್ವಾಗ್ ಮುಂತಾದ ಕ್ರಿಕೆಟಿಗರೂ ರೆಸ್ಟೋರೆಂಟ್‌ಗಳಿಗೆ ಹಣ ಹೂಡುತ್ತಿದ್ದಾರೆ. ಸುನಿಲ್ ಶೆಟ್ಟಿಯಂತೂ ಯಶಸ್ವಿ ಹೋಟೆಲ್ ಉದ್ಯಮಿ. ರೆಸ್ಟೋರೆಂಟ್‌ಗಾಗಿ ಬಿಪ್ಸ್ ಮುಂಬೈನ ಪ್ರತಿಷ್ಠಿತ ಪ್ರದೇಶಗಳಲ್ಲಿ ಜಾಗಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರಂತೆ. ಅವರ ಜೊತೆಗೆ ಇನ್ನೂ ಕೆಲವು ಹಿತೈಷಿಗಳು ಬಂಡವಾಳ ಹೂಡುತ್ತಿದ್ದಾರಂತೆ. 'ಉದ್ಯಮಕ್ಕೆ ಕೈ ಹಾಕುತ್ತಿರುವುದು ಥ್ರಿಲ್ ಎನಿಸುತ್ತಿದೆ. 2014ರ ಮಧ್ಯಭಾಗದೊಳಗೆ ಅದರ ಎಲ್ಲಾ ಮಾಹಿತಿಗಳನ್ನೂ ಹಂಚಿಕೊಳ್ಳುತ್ತೇನೆ' ಎಂದಿದ್ದಾರೆ ಬಿಪಾಶಾ.

■ ಅಮಿ